doc-580
TP-2

Reg No B G 155 ಶ್ರೀ 2 ಪೈಸೆ 4 11 72
In The State First Golden Jubilee Celebrated Paper 'Satyavadi' daily, Mysore

ಸತ್ಯವಾದಿ

ಮೈಸೂರು ದಸರಾ ವಸ್ತುಪ್ರದರ್ಶನ

ಮತ್ತು ಕೈಗಾರಿಕಾ ಮೇಳ 1972

ಸಾಂಸ್ಕೃತಿಕ ಕಾರ್ಯಕ್ರಮ 5-11-1972 ಭಾನುವಾರ

ಕಲಾಕ್ಷೇತ್ರ

6 ರಿಂದ 7 ಸಂಜೆ ಶ್ರೀ ಚಲುವರಾಜು, ಮೈಸೂರು ವಾದ್ಯಗೋಷ್ಠಿ
7-30 ರಿಂದ 9-30 ರಾತ್ರಿ ಶ್ರೀ ಮಹದೇವಸ್ವಾಮಿ ಮಿತ್ರಮಂಡಲಿ, ಮೈಸೂರು
ವಿಶೇಷ ನಾಟಕ "ಅತ್ತೆ ಸೊಸೆ"

●

ಜೀವನರಾಯನಕಟ್ಟೆ

6 ರಿಂದ 7 ಸಂಜೆ ಶ್ರೀಮತಿ ಕೆ. ವಿಜಯ ಮತ್ತು ಲಲಿತ, ಮೈಸೂರು ಸಂಗೀತ
7 ರಿಂದ 8 ರಾತ್ರಿ ಶ್ರೀ ಲಾವಣಿ ಹನುಮಂತಪ್ಪ, ಮೈಸೂರು ಲಾವಣಿ
8 ರಿಂದ 9-30 ಶ್ರೀ ಎಂ. ಸಿ. ಚಿಕ್ಕಸ್ವಾಮಿ, ಮೈಸೂರು ಸಂಗೀತ

ವುಡ್‌ಲಾಂಡ್ಸ್ 1 11 72 ರಿಂದ ಅಮೋಘ ಪ್ರಾರಂಭ

ಕನ್ನಡ ರಾಜ್ಯೋತ್ಸವದ 16 ನೇ ವರ್ಷದ ಪ್ರಯುಕ್ತ

ಅಶ್ವಥ್, ಗಂಗಾಧರ್, ಕಲ್ಪನ, ಪಂಡರೀಬಾಯಿ, ಆರತಿ ಅಭಿನಯಿಸಿರುವ

ಅಮೋಘ ಕನ್ನಡ ಚಿತ್ರ ಪ್ರದರ್ಶನ

ರಾಶಿ ಸಹೋದರರ

ಗೆಜ್ಜೆಪೂಜೆ

ಜ

ಅಪರಾ 4 ನೇ ವಾರ

ಬಾಂಧವ್ಯ

ಪೌತ್ರ - ಅಶ್ವಥ್, ಗಂಗಾಧರ್, ರಾಜೇಶ್, ಬಿ. ವಿ. ರಂಗ, ಪಂಡರೀಬಾಯಿ,
ಸಂಧ್ಯಾರಾಣಿ, ಜಯಶ್ರೀ, ಪದ್ಮಾದೇವಿ ದಿನ 3 ಪ್ರದರ್ಶನಗಳು.

Edited Printedand Published by Dharmapracharanirata
M S Krishna Rao (Propretor) at the Satyavad. Press
Chamarajapuram Mysore

ಉಪವಾಸ

ಗುಲ್ಬರ್ಗ— ಬೆಲೆ ಏರಿಕೆ ವಿರುದ್ಧ ಜಿಲ್ಲಾಧಿಕಾರಿಗಳ ಕಛೇರಿ ಮುಂದೆ 24 ಗಂಟೆಗಳ ಕಾಲ ತಂಡತಂಡವಾಗಿ ಉಪವಾಸ ಇಲ್ಲಿ ನಡೆಯುತ್ತಲೇ ಇದೆ— ಹೀಗೆ ಪಹಪುರ, ಅಲ್ಲಾಂಡ್, ಅಸ್ಪಾಲ್ಪುರಗಳಲ್ಲೂ ಹೀಗೆ ನಡೆಯುತ್ತಿರುವುದಾಗಿ ವರದಿಯಾಗಿದೆ.

ಚಿನ್ನ

ವಾಷಿಂಗ್ಟನ್— ಈ ವರ್ಷದ ಪ್ರಥಮ 9 ತಿಂಗಳಲ್ಲಿ ಅಮೇರಿಕಾ ರಷ್ಯಾ ದಿಂದ 245000 ಔನ್ಸ್ ಚಿನ್ನ ಕೊಂಡಿದೆ.

○

ಕಲ್ಲಿದ್ದಲು ಆದಿರು ರಫ್ತು

ವಿಶಾಖಪಟ್ಟಣ— ಈಗ ಜಪಾನಿಗೆ ರಫ್ತು ಮಾಡುತ್ತಿರುವ 4-5 ಮಿಲಿಯನ್ ಟನ್ ಕಲ್ಲಿದ್ದಲಿನ ಆದುರು 1980 ರ ಹೊತ್ತಿಗೆ 8 ಮಿಲಿಯನ್‌ವಾಗುವುದೆಂದು ಹೇಳಲಾಗಿದೆ.

○

ಡಾ॥ ಮೋದಿ

ನೇತ್ರದಾನಿ ಪದ್ಮಭೂಷಣ ಡಾ॥ ಎಂ. ಸಿ. ಮೋದಿ [ಭಾರತಾಧ್ಯಕ್ಷರಿಗೆ ನೌ॥ ನೇತ್ರ ವೈದ್ಯರು] ಉಚಿತ ನೇತ್ರ ಚಿಕಿತ್ಸಾ ಶಿಬಿರವನ್ನು ಕೊಲ್ಲಾಪುರದ ಗೋಖಲೇ ಕಾಲೇಜು ಕಟ್ಟಡದಲ್ಲಿ ತಾ॥ 8 ರಂದು ನಡೆಸಲಿರುವರು.

○

ಚಲನಚಿತ್ರಗಳು

ಮಡಕೇರಿ— ಚಲನಚಿತ್ರಗಳಲ್ಲಿ ಅಸಭ್ಯ ವಿಷಯಗಳಿರುವುದನ್ನು ಚಿತ್ರನಿರ್ಮಾಪಕ ಶ್ರೀ ನಾಗೇಂದ್ರರಾಯರು ಖಂಡಿಸಿದಾರೆ.

●

"ವಿಕ್ರಮ" ವಿಜಯದಶಮಿ ವಿಶೇಷಾಂಕ

ಬೆಂಗಳೂರಿನಲ್ಲಿ ಪ್ರಕಟವಾಗುವ ಉಜ್ವಲ ರಾಷ್ಟ್ರೀಯ ಸಪ್ತಾಹಿಕ ವಿಕ್ರಮ ಪತ್ರಿಕೆಯ ವಿಜಯದಶಮಿ ವಿಶೇಷಾಂಕವನ್ನು ವಂದನಾಪೂರ್ವಕವಾಗಿ ಸ್ವೀಕರಿಸಿದ್ದೇವೆ. 208 ಪುಟಗಳ ಈ ವಿಶೇಷಾಂಕದಲ್ಲಿ ಕಥೆ, ಕವನ, ಹಾಸ್ಯವಿನೋದ, ದೇಶಹಿತಕರ ಮತ್ತು ದೇಶೋದ್ಧಾರರಿಗೆ ಸಂಬಂಧಿಸಿದ ಉತ್ತಮ ಲೇಖನಗಳು ತುಂಬಿದ್ದು ಮುಂದಿನ ವರ್ಷದ ವಿಶೇಷಾಂಕ ಬರುವವರೆಗೂ ಬೇಕುಬೇಕಾದಾಗ ಓದಿ ಆನಂದಿಸಲು ಅನುಕೂಲವಾಗಿದೆ.

●

ದಿವ್ಯವಾಣಿ

ಮಿತವ್ಯಯವಿಲ್ಲದೆ ಯಾರೂ ಐಶ್ವರ್ಯವಂತರಾಗುವುದಿಲ್ಲ, ಮತ್ತು ಅದನ್ನು ಹೊಂದಿದವರು ಬಡವರಾಗುವುದಿಲ್ಲ.

— ಸಾಮೂಲ್ ಜಾನ್ಸನ್.

ಸಕಲರಿಗೂ ದೀಪಾವಳಿ ಶುಭಾಶಯಗಳು

★

ಕಬಿನಿ ಪ್ರಾಜೆಕ್ಟ್

ಬೆಂಗಳೂರು— ಕಬಿನಿ ಪ್ರಾಜೆಕ್ಟ್ ನಿರ್ಮಿಸಲು ಮೈಸೂರು ಸರಕಾರಕ್ಕೆ ಎಲ್ಲ ಹಕ್ಕುಗಳೂ ಇವೆಯೆಂದೂ, ಈ ನಿರ್ಮಾಣದಿಂದ ಕೇರಳದ ಹಿತಕ್ಕೇನೂ ತೊಂದರೆ ಇಲ್ಲವೆಂದೂ, ಕೇವಲ 250 ಎಕ್ರೆ ಅರಣ್ಯ ಭೂಮಿ ಮುಳುಗಡೆಯಾಗುವುದೆಂದೂ, ಅದಕ್ಕೆ ಪರಿಹಾರನೀಡಲು ಮೈಸೂರು ಸರಕಾರ ಸಿದ್ಧವಾಗಿರುವುದೆಂದೂ ಹೇಳಲಾಗಿದೆ.

★

ಇದೊಂದು ರೀತಿ ಕರುಣೆ

ನವದೆಹಲಿ— ಈದ್ ಹಬ್ಬದ ಸಂದರ್ಭದಲ್ಲಿ ಭಾರತವು ಸಹೃದಯತ್ವ ತೋರಿಸಲು, 300 ಪಾಕಿಸ್ತಾನಿಗಳಿಗೆ ಸ್ವದೇಶಕ್ಕೆ ಹಿಂತಿರುಗುವದಕ್ಕೆ ಅವಕಾಶ ಕೊಡಲು ಸರ್ಕಾರ ನಿರ್ಧರಿಸಿದೆ.

-○

ಪ್ರತಿಭಟನಾ ಅನ್ನಸತ್ಯಾಗ್ರಹ

ಕಾರವಾರ— ನಾಲಾ ನೀರನ್ನು ಬೇರೆ ಕಡೆಗೆ ತಿರುಗಿಸುವದನ್ನು ಪ್ರತಿಭಟಿಸಿ, ಸುಪಾ ತಾಲ್ಲೂಕಿನ ವಿಕೋಲ್ ಗ್ರಾಮದ ಮಹಿಳೆಯರೂ ಸೇರಿ 80 ಮಂದಿ ವ್ಯವಸಾಯಗಾರರು ಗ್ರಾಮ ಜಾವಡ ಮುಂದೆ ಅನಿರ್ದಿಷ್ಟ ಕಾಲ ಅನ್ನಸತ್ಯಾಗ್ರಹವನ್ನು ಪ್ರಾರಂಭಿಸಿರುವರು

★

ಏಷ್ಯಾ ಮೇಳ

ನವದೆಹಲಿ— 3 ನೇ ಏಷ್ಯಾ ಅಂತರ ರಾಷ್ಟ್ರೀಯ ಮೇಳವನ್ನು ಪ್ರಧಾನಿ ಇಂದಿರಾರವರು ಉದ್ಘಾಟಿಸುತ್ತಾ— ಏಷ್ಯಾ ರಾಷ್ಟ್ರಗಳು ಆರ್ಥಿಕವಾಗಿ ಬಲಗೊಳ್ಳಲೂ ಮತ್ತು ಸ್ವಶಕ್ತಿ ಮೇಲೆ ನಿಲ್ಲಲೂ, ಇತರ ಶಕ್ತಿಗಳು ಸೂರೆಮಾಡದಿರಲೂ ಎಚ್ಚರಿಸಬೇಕು ಎಂದು ಹೇಳಿದರು.

○

ರೂ. 5 ಕೋಟಿ ರಿಪೇರಿ

ಬೆಂಗಳೂರು— ತುಂಗಭದ್ರ ಪ್ರಾಜೆಕ್ಟಿನ ಎಡದಂಡೆ ಕಾಲುವೆಯನ್ನು ರೂ 5 ಖರ್ಚಿನಿಂದ ರಿಪೇರಿ ಮಾಡಲು ಸರ್ಕಾರ ನಿರ್ಧರಿಸಿದೆ

● ಪಟ್ಟಣಗಳ ಮತ್ತು ನಗರಗಳಲ್ಲಿಯ ಗಿಡನುರ ಸಂಪತ್ತನ್ನು ಕಾಪಾಡಲು ಕೇಂದ್ರ ವ್ಯವಸಾಯ ಸಚಿವಾಲಯವು ಹೊಸ ಕ್ರಮ ಕೈಗೊಂಡಿದೆ.

ಮೈಸೂರು ದಸರಾ ವಸ್ತುಪ್ರದರ್ಶನ

ಮತ್ತು

ಕೈಗಾರಿಕಾ ಮೇಳ 1972

ಸಾಂಸ್ಕೃತಿಕ ಕಾರ್ಯಕ್ರಮ 6-11-72 ಸೋಮವಾರ

ಕಲಾಕ್ಷೇತ್ರ

5-30 ರಿಂದ 7 ಸಂಜೆ ಶ್ರೀಮತಿ ಆರ್. ಎಸ್. ಜಾನಕಿ, ಬೆಂಗಳೂರು ಸಂಗೀತ

7 ರಿಂದ 9-30 ಮೈಸೂರು ನಗರದ ಪೌರಸಭಾ ಸದಸ್ಯರುಗಳಿಂದ
ವಿಶೇಷ ನಾಟಕ " ಸಂಗೊಳ್ಳಿ ರಾಯಣ್ಣ "

ಜೀವನರಾಯನಕಟ್ಟೆ

5-30ರಿಂದ 7 ಶ್ರೀ ಬಿ. ಎಸ್. ರಂಗಸ್ವಾಮ್ಯೆಯಂಗಾರ್, ಮೈಸೂರು ಸಂಗೀತ

7 ರಿಂದ 8 ಶ್ರೀಮತಿ ಎಸ್. ಆರ್. ಕುಮುದಾಂಬ, ಮೈಸೂರು ಸಂಗೀತ

8 ರಿಂದ 9-30 ಶ್ರೀ ಕೆ. ಜೆ. ವೆಂಕಟಾಚಾರ್, ಮೈಸೂರು ಪಿಟೀಲು

ದಯವೇ ಧರ್ಮದ ಮೂಲ

" ಅಹಿಂಸಾ ಪರಮೋ ಧರ್ಮಃ " ಎಂದು ವೇದ ಸಾರಿರುವುದು ಎಲ್ಲರಿಗೂ ಗೊತ್ತಾದ ವಿಷಯ ; ಸಕಲ ಪ್ರಾಣಿಗಳೆಲ್ಲರಿಗೂ ನಾವು ಕರುಣೆ ತೋರಿಸಬೇಕು ; ದಯವೇ ಧರ್ಮದ ಮೂಲವಾಗಿದೆ ; ತನಗೆ ಬರುವ ದುಃಖವನ್ನು ತಿಳಿದಿರುವವನು ಇತರ ಪ್ರಾಣಿಗಳಿಗೆ ತೊಂದರೆ ಕೊಡಕೂಡದು ; ಅವನು ತನ್ನನ್ನು ತಾನು ಹೇಗೆ ಪ್ರೀತಿಸುತ್ತಾನೋ ಅದೇ ತರಹ ಇತರ ಪ್ರಾಣಿಗಳನ್ನೂ ಪ್ರೀತಿಸಬೇಕು.

' ಸಕಲ ಪ್ರಾಣಿಗಳನ್ನೂ ತನ್ನಂತೆ ಭಾವಿಸಬೇಕೇ "
(ಬಸವೇಶ್ವರ ವಚನ ಸಂಗ್ರಹ – ಪುಟ 193)

ನಿಮ್ಮ ನೆರೆಯವರನ್ನು ನಿಮ್ಮಂತೆ ಪ್ರೀತಿಸಿರಿ ಎಂದು ಯೇಸುಕ್ರಿಸ್ತರೂ ಹೇಳಿದ್ದಾರೆ. ತಿರುವಳ್ಳುವರು ' ನಿಮಗೆ ಬುದ್ಧಿ ಇದ್ದರೆ ಇತರ ಪ್ರಾಣಿಗಳನ್ನು ನಿಮ್ಮಂತೆ ಪ್ರೀತಿಸಬೇಕು ; ನೀವು ಪ್ರೀತಿಸುವುದಿಲ್ಲವೆಂದರೆ ನಿಮಗೆ ಬುದ್ಧಿಯಿಲ್ಲವೆಂದು ಅರ್ಥವಾಗುತ್ತದೆ ' ಎಂದಿದ್ದಾರೆ.

" ಅರಿವಿನಾಲ್ ಆಗುವುದುಂಡೋ ಪಿರಿದಿನ್ ನೋಱುೞ್
ತನ್ನೋಱುಯ ಪೋಲ್ ಪೋರ್ವಾಕ ಕಡೆ "

(ಕುರಳ್ – ಪುಟ 315

ಇದರ ಅರ್ಥ ಇತರ ಪ್ರಾಣಿಗಳಿಗೆ ಬರುವ ದುಃಖವನ್ನು ನಿನಗೆ ಬಂದಿದ್ದಾಗಿ ಭಾವಿಸುವುದಿಲ್ಲವಾದರೆ ಬುದ್ಧಿಯಿಂದ ಪ್ರಯೋಜನ ಏನು ? (ಕ. ನು)

ಭಾರತದಲ್ಲಿ ಗೋವಧೆ

ಪೂರ್ಣ ನಿಶೇಧವಾಗಲಿ

○★●★○

Protect the Cow

' ಮಾನವನು ಕೀಳು ಸೃಷ್ಟಿಯ ಧಣಿ, ಶ್ರೀಷ್ಠನೆನ್ನುವುದು ಸೂಕ್ತಿನ' ಕಲ್ಪನೆ ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯದ ಧರ್ಮಕರ್ತ

—ಮಹಾತ್ಮಾ ಗಾಂಧಿ

ಈ ಸಂದೇಶ ಹೊತ್ತ ಚಿತ್ರ ಸಂದೇಶ ರವರ ಬೊಚ್ಚಲು ಚಿತ್ರ

ಅನ-ಹುಡುಗ

Help The Gorakshana

—Humanitari n Propoganda Monthly ...

SHAKTI

SUDHA

A Superb Tonic

Contribute Liberally to the National Defence Fund

Quality Printi & Neat Binding

Lakshminarasimha Press

Sivarampet, Mysore